# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 135 |
| ಸದಸ್ಯರ ಹೆಸರು | : ಶ್ರೀ ಪ್ರಸನ್ನಕುಮಾರ |
| ಉತ್ತರಿಸುವ ದಿನಾಂಕ | : 10.07.2018 |
| ಉತ್ತರಿಸಬೇಕಾದವರು | : ನಗರಾಭಿವೃದ್ಧಿ ಮತ್ತು ವಸತಿ ಸಚಿವರು. |

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ | ನಗರಾಭಿವೃದ್ಧಿ ಪ್ರಾಧಿಕಾರಗಳ ವತಿಯಿಂದ ಸಾರ್ವಜನಿಕ ಉದ್ದೇಶಕ್ಕಾಗಿ ಸಂಘ-ಸಂಸ್ಥೆಗಳಿಗೆ ನೀಡುವ ನಿವೇಶನವನ್ನು 30 ವರ್ಷಗಳ ಕಾಲಾವಧಿಗೆ ಲೀಜ್‌ನ್ನು ನೀಡುತ್ತಿದ್ದು, ಈ ಅವಧಿ ಮುಗಿದ ನಂತರ ಲೀಜ್‌ನ್ನು ಚಾಲ್ತಿ ಸಾಲಿನ ಹೆಚ್ಚಿನ ಮೊತ್ತನ್ನು ಪಾವತಿಸಿ ನವೀಕರಣ ಮಾಡಿಕೊಂಡು ಮುಂದುವರೆಸಿಕೊಳ್ಳಲು ಸಂಘ-ಸಂಸ್ಥೆಗಳಿಗೆ ಸಾಧ್ಯವಾಗುವುದಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991 ರನ್ವಯ ಹಂಚಿಕೆಯಾಗಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು 30 ವರ್ಷಗಳ ಲೀಜ್ ಅವಧಿ ಮುಗಿದ ನಂತರ ಪುನಃ ಲೀಜ್ ಅವಧಿಯನ್ನು ನವೀಕರಿಸುವ / ವಿಸ್ತರಿಸುವ ಕುರಿತಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ(ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991 ರ ನಿಯಮ 8(1) ಮತ್ತು 10(14) ರಲ್ಲಿ ಈ ಕೆಳಕಂಡಂತೆ ಅವಕಾಶ ಕಲ್ಪಿಸಿದೆ.<br><br>**"8. Lease amount of site allotted to Institutions.-**(1) The lease amount of the site to be allotted on lease basis shall be fixed by the authority provided the value of the site per Sq.Mtr. is fixed not less than the value per Sq.Mtr. of the largest residential site in that area:<br><br>[Provided that in case of renewal of lease of civic amenity sites allotted to educational and such other institutions engaged in Charitable Activities, the lease amount shall be fixed at fifty percent more than the original value fixed at the time of allotment of the site on lease basis, for a further period of lease as per sub-rule (14) of Rule 10.]<br><br>**"10.Conditions of allotment of Civic Amenity Sites.-** (14) the lease may be renewed in favour of the lessee for a further period of thirty years with the prior approval of the Government by refixing the lease amount in accordance with sub-rule (1) of Rule 8.]<br><br>ಮೇಲ್ಕಂಡ ನಿಯಮಗಳನ್ವಯ, ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಹಂಚಿಕೆಯಾದ ನಾಗರೀಕ ಸೌಲಭ್ಯ ನಿವೇಶನಗಳಿಗೆ ಗುತ್ತಿಗೆ ದರವನ್ನು ನಿಗದಿಪಡಿಸಿ ಮುಂದಿನ 30 ವರ್ಷಗಳ ಅವಧಿಯವರೆಗೆ ಸರ್ಕಾರದ ಪೂರ್ವಾನುಮತಿ ಯೊಂದಿಗೆ ನವೀಕರಿಸಲು ಅವಕಾಶವಿರುತ್ತದೆ. |

| | | |
|---|---|---|
| ಆ | 30 ವರ್ಷಗಳ ಲೀಜ್ ಅವಧಿಯ ಬದಲಾಗಿ 99 ವರ್ಷಗಳವರೆಗೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಸರ್ಕಾರದಲ್ಲಿ ಪ್ರಸ್ತಾವನೆಯಿರುವುದಿಲ್ಲ. |

ಸಂಖ್ಯೆ: ನಅಇ 126 ಬೆಮಪ್ರಾ 2018

(ಯು.ಟಿ.ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು